ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ ದಿನಾಂಕ ೨೭ನೇ ಮಾರ್ಚ್ ೧೯೮೭ ಚೈತ್ರ ೨೧, ೧೯೦೯, ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧-೦೪ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ನೀಡಲಾದ ಮೌಕಿಕ ಉತ್ತರಗಳು

ಆಂಗ್ಲೋ ಇಂಡಿಯನ್ಸ್‌ಗೆ ಕ್ಷೇತ್ರಗಳ ಮೀಸಲಾತಿ

೫೩೭. ಶ್ರೀ ಜೆ. ಎ. ಫರ್ನಾಂಡಿಸ್ (ನಾಮ ನಿರ್ದೇಶನ ಹೊಂದಿದವರು).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆಂಗ್ಲೋ ಇಂಡಿಯನ್ಸ್‌ರವರಿಗೆ ಸ್ಥಾನಗಳನ್ನು ಮೀಸಲಿಡುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೆ ?

ಆ) ಇಲ್ಲದ ಪಕ್ಷದಲ್ಲಿ ಬೆಂಗಳೂರು ಮಹಾನಗರಪಾಲಿಕೆಯಲ್ಲಿ ಕೊನೆ ಪಕ್ಷ ೨ ಮೀಸಲು ಕ್ಷೇತ್ರಗಳನ್ನು ಆಂಗ್ಲೋ ಇಂಡಿಯನ್ಸ್‌ರವರಿಗೆ ಸರ್ಕಾರ ಮೀಸಲಿಡುವುದೇ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಇಲ್ಲ.

SRI J.A. FERNANDEZ.—I have asked two questions. The first question has been answered and the second question has not been answered.

SRI R. V. DESHPANDE.—Both (a) and (b) have been bracketted and answered as 'No.'

SRI J.A. FERNANDES.—May I submit that in the Constitution of India our community has been specifically mentioned as a minority and certain privileges have been given to us. These privileges expires next year. So, we thought with the hope of participating in the national development, some consideration can be given to the community starting from reserving two constituencies in the Bangalore City Corporation. The purpose is that we can also participate in the mainstream of Indian politics. I think the Government

will consider this and be kind enough to acknowledge the services of the community and give us an opportunity also to serve in the Corporation.

SRI R. V. DESHPANDE —we have already acknowledged the services of the community as Sri Fernandez is here. As far as the Bangalore City Corporation is concerned in the Bangalore City there are 12 Assembly constituencies and in Corporation there are 87 divisions, where in we have reserved 17 for women and 9 for SCs STs and absolutely we do not find any reason for reserving these constituencies as requested by the Hon. Member.

SRI J.A. FERNANDEZ.—Artscle 334 (3) of the Constitution provides for clubbing our community along with SCs/STs. 9 constituencies are reservaedifor SCs/STs. I think there are 87 constituencies. At least 2 can be given to the Anglo-Indian community. Will the, Government kindly consider?

SRI R. V. DESPHANDE.—I have already replied categorically.

ಅಧ್ಯಕ್ಷರು —ಮಾನ್ಯ ಲಕ್ಕಪ್ಪನವರ ಹಾಗೂ ಶ್ರೀ ಯಡಿಯೂರಪ್ಪನವರ ಪ್ರಶ್ನೆಗೆ ಸಮಯವನ್ನು ಕೇಳಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಜಿಲ್ಲಾ ಪರಿಷತ್ ಅಧ್ಯಕ್ಷರುಗಳು ಎಷ್ಟು ಟಿ. ಎ. ಡಿ. ಎ. ತೆಗೆದಂಕೊಂಡಿದ್ದಾರೆಂದು ನಾನು ಕೇಳಿದ್ದೇನೆ. ಇದಕ್ಕೆ ಸಮಯ ಏಕೆ ಬೇಕು ? ಯಾವಾಗ ಉತ್ತರ ಕೊಡುತ್ತಾರೆ ?

ಅಧ್ಯಕ್ಷರು.—ಕೊಡಿಸುತ್ತೇನೆ.

ಎನ್. ಆರ್. ಐ. ಕಾಲೋನಿಯಲ್ಲಿ ನಿರ್ಮಿತವಾದ ಕಟ್ಟಡ

೩೨೭ ಶ್ರೀ ಆರ್.ಎನ್. ನಾಯ್ಕ (ಭಟ್ಕಳ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎನ್.ಆರ್.ಐ. ಕಾಲೋನಿಯಲ್ಲಿ ಲೋಕೋಂಡಪಾಲ್ ಹೆಸರಿನಲ್ಲಿ ನಿರ್ಮಿತವಾದ ಕಟ್ಟಡವನ್ನು ನೆಲಸಮ ಮಾಡಲು ಆದೇಶಿಸಲಾಗಿತ್ತೆ ?

ಆ) ಯಾವ ದಿನಾಂಕದಂದು ಲಿಖಿತ ಆದೇಶ ನೀಡಲಾಯಿತು ?

ಇ) ಯಾವ ತಾರೀಖಿನಂದು ಜಾರಿಗೆ ಇಳಿಸಲಾಯಿತು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಆರ್. ಎನ್. ನಾಯ್ಕ.—ಕಳೆದ ಸಲ ಶಾಸನ ಸಭೆಯಲ್ಲಿ ಎನ್.ಆರ್ ಐ. ಹಗರಣದ ಬಗ್ಗೆ ಪ್ರಸ್ತಾಪ ಮಾಡಿದಾಗ ಹೇಳಿದರು ಏನೇನು ಬಿಲ್ಡಿಂಗ್ ಪಗೈರಿಗೆ ಅವಕಾಶ ಕೊಟ್ಟಿದ್ದೇವೆ ಅದನ್ನೆಲ್ಲಾ ನಾವು ಕೆಡವಿ ಹಾಕುತ್ತೇವೆಂದು. ಅದು ತಮಗೆ ನೆನಪು ಇದೆ ಎಂದು ನನಗನ್ನಿಸುತ್ತದೆ. ಈವರೆಗೆ ಯಾರೂ ಯಾರ ಬಿಲ್ಡಿಂಗ್ ಅನ್ನು ಬರಂಳಿಸಿ ಹಾಕಿದ್ದೀರಿ ಮತ್ತು ಅದಕ್ಕೆ ಯಾವಾಗ ಆದೇಶ ಕೊಟ್ಟಿದ್ದೀರಿ ಇಲ್ಲವೇ ಅಸೆಂಬ್ಲಿಯಲ್ಲಿ ಹೇಳಿ ಸುಮ್ಮನೆ ಕುಳಿತಿದ್ದೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಸದಸ್ಯರು ಎನ್. ಆರ್. ಐ. ಕಾಲೋನಿಯಲ್ಲಿ ಲೋಕಂಡಪಾಲ್ ಹೆಸರಿನಲ್ಲಿ ನಿರ್ಮಿತವಾದ ಕಟ್ಟಡವನ್ನು ನೆಲಸಮ ಮಾಡಲು ಆದೇಶಿಸಲಾಗಿದೆಯೇ